**ಡಾ.ತಳವಾರ ಸಾಬಣ್ಣ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಇವರ ನಿಯಮ 330ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಹೇಳಿಕೆ.**

**ವಿಷಯ: ಹೊರರಾಜ್ಯಗಳಲ್ಲಿ ಕನ್ನಡ ಮಾಧ್ಯಮಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿದೆ. ಮಹಾರಾಷ್ಟ್ರದ ಸಾಂಗ್ಲಿಯ ಜತ್ತ, ಸೊಲ್ಲಾಪುರ ಅಕ್ಕಲಕೋಟೆ, ಮಂಗಳವೇಢ, ದಕ್ಷಿಣಸೊಲ್ಲಾಪುರ, ಉಮರ್ಗಾ, ಕೊಲ್ಹಾಪುರಜಿಲ್ಲೆ, ಕೇರಳದ ಕಾಸರಗೋಡು, ಮಂಜೇಶ್ವರ, ಆಂಧ್ರಪ್ರದೇಶದ ಆನಂತಪುರ, ರಾಮದುರ್ಗ, ಮೆಹಬೂಬ್ ನಗರ, ತಮಿಳುನಾಡಿನ ಹೊಸೂರು, ಕೃಷ್ಣಗಿರಿ, ತಾಳವಾಡಿ, ನೀಲಗಿರಿ ಮತ್ತು ಗೋವಾ ರಾಜ್ಯಗಳಲ್ಲಿ ಕನ್ನಡ ಶಾಲೆಗಳು ಸಕ್ರಿಯವಾಗಿವೆ. ಗಡಿನಾಡು ಮತ್ತು ಹೊರನಾಡು ಕನ್ನಡಿಗರ ಹಿತರಕ್ಷಣೆಗಾಗಿ ಡಾ. ಬರಗೂರು ರಾಮಚಂದ್ರಪ್ಪ ಅವರ ಗಡಿನಾಡು ವರದಿ, ಶ್ರೀವಾಟಾಳ್ ನಾಗರಾಜ್ ಅವರ ಏಕಸದಸ್ಯ ವರದಿ, ಡಾ.ಸರೋಜಿನಿ ಮಹಿಷಿ ವರದಿ, ಶ್ರೀ ಹೆಚ್.ಕೆ. ಪಾಟೀಲ್ ಸಂಪುಟ ಉಪ ಸಮಿತಿ ವರದಿ , ಮಾಜಿಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರ ನಿರ್ದೇಶನದ ಗಡಿ ಪ್ರಾಧಿಕಾರದ ವರದಿಗಳು ಸಲ್ಲಿಕೆಯಾಗಿವೆ, ಕನ್ನಡಿಗರ ಬದುಕು ಮತ್ತು ಭವಿಷ್ಯ ಬಲಪಡಿಸುವ ದಾಖಲೆಗಳಾಗಿವೆ. ಆದರೆ ಗಡಿನಾಡು ಮತ್ತು ಹೊರನಾಡು ಕನ್ನಡಿಗರು ಸರಕಾರಿ ಶಿಕ್ಷಣ ಮತ್ತು ಉದ್ಯೋಗ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಗಡಿನಾಡು ಮತ್ತು ಹೊರನಾಡು ಕನ್ನಡಿಗರ ಹಿತಾಸಕ್ತಿ ಕಾಪಾಡಲು ಹಾಗೂ ಶಿಕ್ಷಣ ಮತ್ತು ಉದ್ಯೋಗ ಅವಕಾಶ ಒದಗಿಸಲು ಸರಕಾರ ಕ್ರಮಕೈಗೊಳ್ಳುವ ಕುರಿತು ನಿಯಮ 330ರ ಮೇರೆಗೆ ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.**

**ಉತ್ತರ:-**

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ರಾಜ್ಯದ 19 ಜಿಲ್ಲೆಗಳ 63 ಗಡಿ ತಾಲ್ಲೂಕುಗಳು ಹಾಗೂ 06 ಹೊರರಾಜ್ಯಗಳಾದ ಮಹಾರಾಷ್ಟ್ರ, ಕೇರಳ, ತಮಿಳುನಾಡು, ಗೋವಾ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯದಲ್ಲಿನ ಗಡಿ ಭಾಗದ ಕನ್ನಡಿಗರ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಯನ್ನು ಸುಧಾರಿಸಿ ವಿವಿಧ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಹಾಗೂ ಹೊರರಾಜ್ಯಗಳಲ್ಲಿರುವ ಕನ್ನಡಿಗರಿಗೆ ಅನುಕೂಲವಾಗುವಂತೆ, ಕರ್ನಾಟಕ ಸರ್ಕಾರದಿಂದ ಮತ್ತು ಹೊರ ರಾಜ್ಯಗಳಿಂದ ಕನ್ನಡಿಗರಿಗೆ ಲಭ್ಯವಿರುವ ವಿವಿಧ ಶೈಕ್ಷಣಿಕ ಮತ್ತು ಔದ್ಯೋಗಿಕ ಸವಲತ್ತುಗಳ ಬಗ್ಗೆ ಇರುವ ಆದೇಶಗಳ ಬಗ್ಗೆ ಕೈಪಿಡಿ ಪುಸ್ತಕವನ್ನು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ತಯಾರಿಸಿ ಗಡಿ ಕನ್ನಡಿಗರಿಗೆ ನೀಡಲಾಗಿದೆ.

ಶ್ರೀವಾಟಾಳ್ ನಾಗರಾಜ್ ಅವರ ಏಕಸದಸ್ಯ ವರದಿ ಡಾ. ಬರಗೂರು ರಾಮಚಂದ್ರಪ್ಪ ಅವರ ವರದಿ-2002 ಗಡಿನಾಡು ವರದಿ, ಡಾ.ಸರೋಜಿನಿ ಮಹಿಷಿ ಪರಿಷ್ಕೃತ ವರದಿ 2016, ಶ್ರೀ ಹೆಚ್.ಕೆ. ಪಾಟೀಲ್ ಸಂಪುಟ ಉಪಸಮಿತಿ ವರದಿ 2017, ಮಾಜಿಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರ ನಿರ್ದೇಶನದ ಮೇರೆಗೆ ಗಡಿ ಅಭಿವೃದ್ಧಿ ಪ್ರಾಧಿಕಾರದ ವರದಿ 2023ಗಳನ್ನು ಆಯಾ ಮುಖ್ಯ ಮಂತ್ರಿಗಳಿಗೆ ಆಯಾ ವರ್ಷದಲ್ಲಿ ಸಲ್ಲಿಕೆಯಾಗಿವೆ.

ಮಾನ್ಯ ಹೆಚ್. ಕೆ. ಪಾಟೀಲ ರವರ ಸಚಿವ ಸಂಪುಟ ಉಪ ಸಮಿತಿಯ ವರದಿ 2017ರ ಆಧಾರದ ಮೇಲೆ ಗಡಿ ಅಭಿವೃದ್ಧಿ ಪ್ರಾಧಿಕಾರವು ನಿಗದಿತ ಅನುದಾನದ ಮಿತಿಯಲ್ಲಿ ಅಭಿವೃದ್ಧಿ ಕಾಮಗಾರಿ/ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿದ್ದು ಬಗೆಹರಿಸಲು ಬಾಕಿ ಇರುವ

ಹೊರನಾಡಿನ ಹಲವಾರು ಸಮಸ್ಯೆಗಳ ಪಟ್ಟಿಯನ್ನು ಪರಿಹಾರಗಳ ಸೂಚನೆಯೊಂದಿಗೆ ಹೊರ ರಾಜ್ಯಗಳ ಗಡಿ ಕನ್ನಡಿಗರ ಸಮಾವೇಶ ನಡೆಸಿ ದಿನಾಂಕ:02-02-2023ರಂದು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಸಮಸ್ಯೆಗಳನ್ನು ಬಗೆಹರಿಸಲು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಆರ್ಥಿಕ ಇಲಾಖೆಯು ಹಂಚಿಕೆ ಮಾಡುತ್ತಿರುವ ಅನುದಾನದ ಮಿತಿಯಲ್ಲಿ ಗಡಿನಾಡ ಕನ್ನಡಿಗರಿಗೆ ಅತಿ ಅಗತ್ಯ ಸವಲತ್ತುಗಳಾದ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ನೆರವನ್ನು ನೀಡಲಾಗುತ್ತಿದೆ.

## ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಕೈಗೊಂಡಿರುವ ಕಾರ್ಯ ಕ್ರಮಗಳು

- ಗಡಿನಾಡ/ಹೊರನಾಡ ಪ್ರದೇಶಗಳ ಕನ್ನಡ ಮಾಧ್ಯಮ ಶಾಲೆಗಳಿಗೆ ಶಾಲಾ ಕೊಠಡಿ/ಸಾಂಸ್ಕೃತಿಕ ಭವನ/ಬಯಲುರಂಗಮಂದಿರ ನಿರ್ಮಾಣ/ಶೌಚಾಲಯ/ಗ್ರಂಥಾಲಯ ಕೊಠಡಿ/ಗಣಕಯಂತ್ರ ಕೊಠಡಿಗಳ ನಿರ್ಮಾಣಕ್ಕೆ ಪ್ರಾಧಿಕಾರದ ಆರ್ಥಿಕ ಇತಿಮಿತಿಯಲ್ಲಿ ಅನುದಾನ ನೀಡಲಾಗಿದೆ.
- ಸುಮಾರು 60 ಕನ್ನಡ ಮಾಧ್ಯಮ ಶಾಲೆಗಳಿಗೆ ಸ್ಮಾರ್ಟ್ ಬೋರ್ಡ್ ಪರಿಕರಗಳನ್ನು ಒದಗಿಸಲಾಗಿದೆ.
- ಮಹಾರಾಷ್ಟ್ರ ರಾಜ್ಯದ ಗಡಿ ಭಾಗದಲ್ಲಿರುವ ಕನ್ನಡ ಶಾಲೆಗಳಿಗೆ ಇದುವರೆಗೆ ಮರಾಠಿ ಭಾಷೆಯಲ್ಲಿ ವಿತರಿಸುತ್ತಿದ್ದ ನಲಿ-ಕಲಿ ಸಾಮಗ್ರಿಗಳ ಬದಲಾಗಿ ಕನ್ನಡ ಮಾಧ್ಯಮದ ನಲಿ-ಕಲಿ ಕಲಿಕಾ ಸಾಮಗ್ರಿಗಳನ್ನು, ಹಾಗೂ ಇತರೆ ವಿವಿಧ ಅವಶ್ಯಕ ಪುಸ್ತಕಗಳನ್ನು ವಿತರಿಸಲಾಗಿದೆ ಹಾಗೂ ಕಾಸರಗೋಡಿನ ಕನ್ನಡ ಮಾಧ್ಯಮ ಶಾಲೆಗಳಿಗೆ ವಿವಿಧ ಅವಶ್ಯಕ ಕನ್ನಡ ಪುಸ್ತಕಗಳನ್ನು ಸಹ ವಿತರಿಸಲಾಗಿದೆ.
- ಮಹಾರಾಷ್ಟ್ರದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳ ಮಕ್ಕಳಿಗಾಗಿ 5ನೇ ತರಗತಿಯ ಪೂರ್ವ ಉಚ್ಚ ಪ್ರಾಥಮಿಕ ಶಿಷ್ಯವೃತ್ತಿ ಪರೀಕ್ಷೆಯ ಮಾರ್ಗದರ್ಶಿಕೆ ಪುಸ್ತಕಗಳನ್ನು ಮುದ್ರಿಸಿ ಉಚಿತವಾಗಿ ವಿತರಿಸಲಾಗಿದೆ.
- ಹೊರನಾಡು ಕನ್ನಡಿಗರ ಸಮಸ್ಯೆಗಳು ಮತ್ತು ಅವುಗಳ ಪರಿಹಾರಗಳ ಬಗ್ಗೆ ಸಭೆ ನಡೆಸಿ ವರದಿಯನ್ನು ಹಿಂದಿನ ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ:02-02-2023ರಂದು ಸಲ್ಲಿಸಲಾಗಿದೆ ಮತ್ತು ದಿನಾಂಕ:28-3-2025ರಂದು ಗಡಿ ಪ್ರಾಧಿಕಾರವು ಸರ್ಕಾರದ ಮುಖ್ಯಕಾರ್ಯದರ್ಶಿಗಳೊಂದಿಗೆ ಸಂಬಂಧಪಟ್ಟ ಎಲ್ಲಾ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ ಪ್ರತಿ ಇಲಾಖೆಯಲ್ಲಿ ಗಡಿ ಸಮಸ್ಯೆಗಳ ಪರಿಹಾರಕ್ಕಾಗಿ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲು ಕ್ರಮ ವಹಿಸಲಾಗಿದೆ.
- ದಿನಾಂಕ:30-9-2024ರಂದು ಮಹಾರಾಷ್ಟ್ರ ರಾಜ್ಯದ ಜತ್ತ ತಾಲ್ಲೂಕಿನ ಗುಡ್ಡಾಪುರದಲ್ಲಿ ಕರ್ನಾಟಕ ಸಂಭ್ರಮ-50, ಕಾರ್ಯಕ್ರಮದಲ್ಲಿ ಸುಮಾರು 20000 ಮಹಾರಾಷ್ಟ್ರದ ಹೊರನಾಡು ಕನ್ನಡಿಗರ ಸಮಾವೇಶ ಹಾಗೂ ಗಡಿನಾಡು ಚೇತನ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಯಶಸ್ವಿಯಾಗಿ ಆಯೋಜಿಸಲಾಗಿರುತ್ತದೆ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಹೊಸ ಲಾಂಛನವನ್ನು ಬಿಡುಗಡೆ ಮಾಡಲಾಗಿರುತ್ತದೆ.
- ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ 2024-25ನೇ ಸಾಲಿನಲ್ಲಿ ಗೋವಾದ ವಾಸ್ಕೋ, ಔರಂಗಾಬಾದ್, ತಿರುವನಂತಪುರ, ಕಾಸರಗೋಡು, ಮುಂಬೈ, ತಾಳವಾಡಿ, ಮಂತ್ರಾಲಯ, ಏರ್ನಾಕುಲಂ/ಕೊಚ್ಚಿನ್ ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಗಿದೆ.
- ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ ರವರ ಹೆಸರಿನಲ್ಲಿ ಕಾಸರಗೋಡಿನಲ್ಲಿ, ಡಾ.ಜಯದೇವಿ ತಾಯಿ ಲಿಗಾಡೆ ರವರ ಹೆಸರಿನಲ್ಲಿ ಅಕ್ಕಲಕೋಟೆಯಲ್ಲಿ ಅಲ್ಲದೇ ಗೋವಾದಲ್ಲಿಯೂ ಕನ್ನಡ ಭವನ ನಿರ್ಮಿಸಲು 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿಲಾಗಿದೆ. ಈಗಾಗಲೇ ಕಾಸರಗೋಡಿನಲ್ಲಿ ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ ಹೆಸರಿನಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡ ಕಾಮಗಾರಿಗೆ ರೂ.200-00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕಾಮಗಾರಿ 90% ಮುಕ್ತಾಯಗೊಂಡಿರುತ್ತದೆ.

- ಅಕ್ಕಲಕೋಟದಲ್ಲಿ ಡಾ. ಜಯದೇವಿ ತಾಯಿ ಲಿಗಾಡೆ ರವರ ಹೆಸರಿನಲ್ಲಿ ಕನ್ನಡ ಭವನ ನಿರ್ಮಾಣಕ್ಕಾಗಿ ರೂ.207-53 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಶೇ.90% ರಷ್ಟು ಮುಕ್ತಾಯಗೊಂಡಿರುತ್ತದೆ.
- ಗೋವಾದಲ್ಲಿ ಕನ್ನಡ ಭವನ ನಿರ್ಮಿಸಲು ಕೋರ್ಟಾಲಿಂನಲ್ಲಿ 5.15 ಕೋಟಿಗಳಿಗೆ ನಿವೇಶನ ಖರೀದಿಸಲಾಗಿದ್ದು, ಕಟ್ಟಡ ಕಾಮಗಾರಿಯನ್ನು ಮುಂದಿನ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.
- ತಮಿಳುನಾಡಿನ ತಾಳವಾಡಿಯಲ್ಲಿಯೂ ಕೂಡ ಕನ್ನಡ ಭವನ ನಿರ್ಮಾಣಕ್ಕೆ ಪ್ರಾಧಿಕಾರದಿಂದ ಅನುದಾನ ನೀಡಲಾಗಿದ್ದು, ಕಟ್ಟಡ ಪ್ರಗತಿಯಲ್ಲಿರುತ್ತದೆ.
- ಕೇರಳ ರಾಜ್ಯದ ಕನ್ನಡ ಭಾಷಾ ಅಲ್ಪಸಂಖ್ಯಾತರಿಗೆ ಅಕ್ಷಯ ಕೇಂದ್ರದ ಮೂಲಕ ವಿತರಿಸಲಾದ ಪಡಿತರ ಚೀಟಿ ಹಾಗೂ ಮುಂತಾದ ಗುರುತಿನ ಚೀಟಿಗಳಲ್ಲಿ ಕನ್ನಡ ಭಾಷೆಯನ್ನು ಸಹಾ ಮುದ್ರಿಸಲು, ಪೋಲೀಸ್ ಠಾಣೆಗಳಲ್ಲಿ ಕನ್ನಡ ನಾಮಫಲಕವನ್ನು ಅಳವಡಿಸಲು/ಕನ್ನಡದ ಅಧಿಕಾರಿಗಳನ್ನು ಕಛೇರಿಗಳಲ್ಲಿ ನಿಯೋಜಿಸಲು/ಕನ್ನಡ ಬಾರದೇ ಇರುವ ಶಿಕ್ಷಕರನ್ನು ಕನ್ನಡ ಶಾಲೆಗಳಲ್ಲಿ ನೇಮಿಸಿರುವ ಬಗ್ಗೆ ಗಡಿ ಪ್ರಾಧಿಕಾರದ ಅಧ್ಯಕ್ಷರು, ಕೇರಳ ಸರ್ಕಾರದ ಮುಖ್ಯಮಂತ್ರಿಗಳ ಗಮನಕ್ಕೆ ತಂದ ಹಿನ್ನಲೆಯಲ್ಲಿ ಸದರಿ ಪತ್ರಕ್ಕೆ ಕೇರಳ ಸರ್ಕಾರವು ಸಕಾರಾತ್ಮಕವಾಗಿ ಸ್ಪಂದಿಸಿ, ಮೇಲ್ಕಂಡಂತೆ ಕನ್ನಡಿಗರ ಭಾಷಾ ಭದ್ರತೆ ಬಗ್ಗೆ ತೆಗೆದುಕೊಂಡಿರುವ ಕ್ರಮದ ಮಾಹಿತಿಯನ್ನು ನೀಡಿರುತ್ತಾರೆ. ಇದು ಸರ್ಕಾರದ ಸಾಧನೆಯಾಗಿರುತ್ತದೆ. ಪಡಿತರ ಚೀಟಿಗಳಲ್ಲಿ ಕನ್ನಡ ಮುದ್ರಿಸಲು ಕೇರಳ ಆಯುಕ್ತರಿಗೆ ಕೇರಳ ಸರ್ಕಾರ ಶಿಫಾರಸ್ಸು ಮಾಡಿದೆ.
- ಕಾಸರಗೋಡು ಜಿಲ್ಲೆಯ ಗಡಿಭಾಗದ ಗ್ರಾಮಗಳ ಮೂಲ ಹೆಸರುಗಳನ್ನು ಬದಲಾವಣೆ ಮಾಡಿ ಮಲಯಾಳಂ ಹೆಸರುಗಳನ್ನು ಆಗ್ರಾಮಗಳಿಗೆ ಇಟ್ಟಿರುವುದರ ಬಗ್ಗೆ ಆ ಭಾಗದ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಹೆಸರುಗಳ ಬದಲಾವಣೆ ಕಾರ್ಯಗಳನ್ನು ಸ್ಥಗಿತಗೊಳಿಸುವ ಬಗ್ಗೆ ಕ್ರಮಕೈಗೊಳ್ಳಲಾಗಿದೆ. ಕೇರಳದ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಕರ್ನಾಟಕ ಸರ್ಕಾರದಿಂದ ಪತ್ರ ಬರೆಯಲಾಗಿದ್ದು, ಸದರಿಯವರು ಈ ಬಗ್ಗೆ ಪರಿಶೀಲಿಸಿ ಹೆಸರುಗಳನ್ನು ಬದಲಾವಣೆ ಮಾಡುವುದಿಲ್ಲವೆಂಬ ಆಶ್ವಾಸನೆ ನೀಡಿರುತ್ತಾರೆ ಹಾಗೂ ಅಂತಹ ಯಾವುದೇ ಪ್ರಸ್ತಾವನೆ ಇಲ್ಲವೆಂದು ಸಹ ಖಚಿತಪಡಿಸಿರುತ್ತಾರೆ.

  ಉದಾ: ಮಂಜೇಶ್ವರ (ಮಂಜೇಶ್ವರಂ), ನೆಲಿಕುಂಜೆ (ನೆಲ್ಲಿಕುನ್ನು),ಪಿಲಿಕುಂಜೆ (ಪಿಲಿಕುನ್ನು) ಮಧೂರು (ಮಧುರಂ), ಕುಂಬ್ಳೆ (ಕುಂಬ್ಳ), ಕರಡ್ಕ (ಕಡಗಂ),
- ಕಾಸರಗೋಡಿನ ರೈಲ್ವೆ ನಿಲ್ದಾಣಗಳಲ್ಲಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಲೆಯಾಳಂ ನಾಮಫಲಕಗಳನ್ನು ತೆಗೆದು ಮಲೆಯಾಳಂ, ಹಿಂದಿ, ಇಂಗ್ಲಿಷ್ ನಾಮಫಲಕಗಳ ಜೊತೆಗೆ ಕನ್ನಡ ಭಾಷೆಯನ್ನು ಸೇರಿಸಿ ಅಳವಡಿಸಲು ಜಿಲ್ಲಾಧಿಕಾರಿಗಳು, ಕಾಸರಗೋಡು, ರೈಲ್ವೆ ಮುಖ್ಯಸ್ಥರು, ಮತ್ತು ಕೇಂದ್ರ ಸರ್ಕಾರದ ಭಾಷಾ ಅಲ್ಪಸಂಖ್ಯಾತರ ಕಾರ್ಯಾಲಯಕ್ಕೆ ಗಡಿ ಪ್ರಾಧಿಕಾರ ಪತ್ರ ಬರೆದಿದ್ದು, ಇದಕ್ಕೆ ಸ್ಪಂದಿಸಿದ ಭಾಷಾ ಅಲ್ಪಸಂಖ್ಯಾತರ ಇಲಾಖೆಯು ದಕ್ಷಿಣ ವಲಯದ ರೈಲ್ವೆ ವಿಭಾಗೀಯ ವ್ಯವಸ್ಥಾಪಕರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮುಖ್ಯಸ್ಥರಿಗೆ ಪತ್ರ ಬರೆದು ನಿರ್ದೇಶನ ನೀಡುವ ಮೂಲಕ ಕನ್ನಡ ನಾಮಫಲಕ ಮರುಸ್ಥಾಪಿಸಲು ಕ್ರಮ ಕೈಗೊಂಡಿದೆ.
- ಪ್ರಸ್ತುತ ಸಾಲಿನಲ್ಲಿ ಕೇರಳ ಮುಖ್ಯಮಂತ್ರಿಗಳು, ಕೇರಳದ ವಿರೋದ ಪಕ್ಷದ ನಾಯಕರು ಹಾಗೂ ಕೇರಳದ ವಿಧಾನ ಸಭಾ ಅಧ್ಯಕ್ಷರನ್ನು ಭೇಟಿ ಮಾಡಿ ಕೇರಳದ ಕಾಸರಗೋಡಿನ ಕನ್ನಡಿಗರ ವಿವಿಧ ಸಮಸ್ಯೆಗಳ ಬಗ್ಗೆ ಹಾಗೂ ಪರಿಹಾರಗಳ ಬಗ್ಗೆ ಚರ್ಚಿಸಲಾಗಿದ್ದು ಕ್ರಮ ಕೈಗೊಳ್ಳುವುದಾಗಿ ಪ್ರಾಧಿಕಾರಕ್ಕೆ ಭರವಸೆ ನೀಡಿರುತ್ತಾರೆ.
- ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ದಿನಾಂಕ:28-03-2025ರ ಸಭಾ ನಿರ್ಣಯದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಮಾಜ ಕಲ್ಯಾಣ, ಪುರಾತತ್ವ ಸಂಗ್ರಹಾಲಯ, ಅಲ್ಪಸಂಖ್ಯಾತರ ಕಲ್ಯಾಣ, ಹಿಂದುಳಿದ ವರ್ಗಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳು ತಕ್ಷಣ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ ಹಿರಿಯ ಅಧಿಕಾರಿಗಳನ್ನು ನೇಮಿಸಿ ಸಮನ್ವಯ ಅಧಿಕಾರಿಯ ಹೆಸರು, ಸಂಪರ್ಕಿಸುವ

ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ಘೋಷಿಸಿದ್ದು, ಈ ವಿವರಗಳನ್ನು ಗಡಿನಾಡು/ಹೊರನಾಡು ಕನ್ನಡಿಗರು ಮತ್ತು ಸಂಘ ಸಂಸ್ಥೆಗಳಿಗೆ ತಿಳಿಸಲಾಗಿದೆ.

- ದಿನಾಂಕ: 25-11-2025 ರಂದು ಗೋವಾದಲ್ಲಿನ ಗಡಿ ಕನ್ನಡಿಗರ ಸಮಸ್ಯೆಗಳ ಬಗ್ಗೆ ಸಭೆ ನಡೆಸಿ, ಗೋವಾ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಲಾಗಿದೆ.

ಮುಂದುವರೆದು, ಪ್ರಾಧಿಕಾರವು ಗಡಿನಾಡು/ಹೊರನಾಡು ಕನ್ನಡಿಗರ ನಿರಂತರ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ ಕರ್ನಾಟಕ ಸರ್ಕಾರವು ಮಾನ್ಯ ಕಾನೂನು ಮತ್ತು ಪ್ರವಾಸೋದ್ಯಮ ಸಚಿವರಾದ ಶ್ರೀ ಹೆಚ್. ಕೆ. ಪಾಟೀಲ್ ರವರನ್ನು **"ಗಡಿ ಉಸ್ತುವಾರಿ ಸಚಿವರನ್ನಾಗಿ"** ನೇಮಿಸಿರುತ್ತದೆ.

ಕಾಸರಗೋಡು ಕನ್ನಡಿಗರ ಹಿತಾಸಕ್ತಿಯಿಂದ, ಗಮನಿಸುವುದಾದರೆ ಇತ್ತೀಚೆಗೆ ಕೇರಳ ವಿಧಾನಸಭೆಯಲ್ಲಿ "ಮಲಯಾಳಂ ಭಾಷಾ ಮಸೂದೆ-2025" ಎಂಬ ಬಿಲ್ಲನ್ನು ಅಂಗೀಕರಿಸಿದೆ. ಈಗಾಗಲೇ ಇಂತಹ ಮಸೂದೆಯನ್ನು 2017 ರಲ್ಲಿ ಭಾರತದ ಮಾನ್ಯ ರಾಷ್ಟ್ರಪತಿಗಳು ಈಗಾಗಲೇ ತಿರಸ್ಕರಿಸಿದ್ದಾರೆ. ಕೇರಳ ಸರ್ಕಾರದಿಂದ ಪ್ರಸ್ತಾಪಿತ ಬಿಲ್ಲು ಸಂಪೂರ್ಣ ಅಸಂವಿಧಾನಿಕವಾಗಿದೆ ಮತ್ತು ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ಶೇಕಡ 90% ರಷ್ಟು ಜನ ಕೇರಳದಲ್ಲಿ ವಾಸಿಸುತ್ತಿರುವ ಕನ್ನಡ ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ. ಭಾರತ ಸರ್ಕಾರದ ಅಲ್ಪಸಂಖ್ಯಾತ ಸಚಿವಾಲಯವು ಕೇರಳ ಸರ್ಕಾರಕ್ಕೆ ಹಲವಾರು ಬಾರಿ ಕೇರಳ ಭಾಷಾ ಅಲ್ಪಸಂಖ್ಯಾತರ ಹಿತಗಳ ರಕ್ಷಣೆ ಮಾಡಬೇಕೆಂದು ಸೂಚಿಸಿದೆ.

1. ಭಾರತ ಸಂವಿಧಾನದ ಪ್ರಕಾರ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ನೇಮಕಾತಿ ಕಡ್ಡಾಯವಾಗಿದೆ.
2. ಕಾಸರಗೋಡಿನ ಎಲ್ಲಾ ಪೊಲೀಸ್ ಠಾಣೆಗಳು, ರೈಲು ನಿಲ್ದಾಣಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹೊಸ ಸಂಕೇತ ಕನ್ನಡ ಫಲಕಗಳನ್ನು ಪ್ರತಿಷ್ಠಾಪಿಸುವುದು.
3. ಸರಕಾರಿ ಸಾರ್ವಜನಿಕ ಕಚೇರಿ ಪತ್ರವ್ಯವಹಾರವು ಕಾಸರಗೋಡು ಜಿಲ್ಲೆಯಲ್ಲಿ ಸ್ಥಳೀಯ ಕನ್ನಡ ಭಾಷೆಯಲ್ಲಿ ಬರೆಯಲ್ಪಡುವುದು.
4. ಕಾಸರಗೋಡು ಜಿಲ್ಲೆಯಲ್ಲಿ ಉದ್ಯೋಗ ಖಾಲಿ ಸ್ಥಾನಗಳನ್ನು ಕುರಿತಂತೆ, PSC ಅಥವಾ ನೇಮಕಾತಿ ಸಂಸ್ಥೆಯಿಂದ ಬಂದ ಅರ್ಜಿಗಳ ಆಧಾರದ ಮೇಲೆ ಭರ್ತಿ ಮಾಡದೇ, ಸ್ಥಳೀಯ ಭಾಷಾ ಅಲ್ಪಸಂಖ್ಯಾತರ ಜನಸಂಖ್ಯೆ ಆಧಾರದ ಮೇಲೆ ಭರ್ತಿ ಮಾಡವುದು.
5. ಭಾಷಾ ಅಲ್ಪಸಂಖ್ಯಾತರ ಕನ್ನಡಿಗರು ಎದುರಿಸುವ ಸಮಸ್ಯೆಗಳ ಬಗ್ಗೆ ಪ್ರತಿ ಎರಡು ತಿಂಗಳಿಗೊಮ್ಮೆ ನಿಯಮಿತ ಸಭೆಗಳನ್ನು ನಡೆಸಲು ಕಾಸರಗೋಡು ಜಿಲ್ಲಾ ಕಲೆಕ್ಟರ್ ಸಮಿತಿಯಿಂದ ಕ್ರಮ ಕೈಗೊಳ್ಳುವುದು.

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ಸೂಕ್ತ ಕ್ರಮ ತೆಗೆದುಕೊಳ್ಳಲು ಭಾರತ ಸರ್ಕಾರದ ಗೃಹ ಸಚಿವಾಲಯದ ಭಾಷಾ ಅಲ್ಪ ಸಂಖ್ಯಾತ ಇಲಾಖೆ ಈಗಾಗಲೇ ಕೇರಳ ಸರ್ಕಾರಕ್ಕೆ ಸೂಚನೆ ನೀಡಿರುತ್ತದೆ.

ಕಾಸರಗೋಡು ಮತ್ತು ಕೇರಳದ ಇತರ ಕನ್ನಡ ಭಾಷಿಕರು ಮಾತನಾಡುವ ಪ್ರದೇಶಗಳಲ್ಲಿ, ಭಾಷಾತ್ಮಕ ಸುಲಲಿತ ಹೊಂದಿರುವ ವಿದ್ಯಾರ್ಥಿಗಳು ತಮ್ಮ ಮೊದಲ ಭಾಷೆಯಾಗಿ ಕನ್ನಡವನ್ನು ಮತ್ತು ಎರಡನೇ ಭಾಷೆಯಾಗಿ ಮತ್ತೊಂದು ಭಾಷೆಯನ್ನು ಅಧ್ಯಯನ ಮಾಡುತ್ತಿದ್ದಾರೆ. ಇದು ವಿದ್ಯಾರ್ಥಿಗಳು ಹಿಂದಿ ಅಥವಾ ಸಂಸ್ಕೃತ ಅಥವಾ ಉರ್ದುವನ್ನು ಎರಡನೇ ಭಾಷೆಯಾಗಿ ಆಯ್ಕೆಮಾಡಲು ಸಹಾಯ ಮಾಡುತ್ತದೆ.

ಕೇರಳ ಸರ್ಕಾರ ಸಿದ್ದಪಡಿಸಿರುವ ಮಸೂದೆ-2025ನ್ನು ಅಂಗೀಕರಿಸಿದರೆ, ಕನ್ನಡ ವಿದ್ಯಾರ್ಥಿಗಳು ಮಲಯಾಳಂ ಭಾಷೆಯನ್ನು ತಿಳಿಯದಿದ್ದರೂ ಬಲವಂತವಾಗಿ ಕಲಿಯಬೇಕಾಗಬಹುದು, ಇದು ಅವರ ಭವಿಷ್ಯಕ್ಕೆ ಮಾರಕವಾಗಲಿದೆ. ವಿಶೇಷವಾಗಿ ದೇಶದ ಇತರ ಭಾಗಗಳಲ್ಲಿ ಈ ವಿದ್ಯಾರ್ಥಿಗಳು ತಮ್ಮ ಅಧ್ಯಯನವನ್ನು ಮುಂದುವರಿಸಿದರೆ, ಅವರಿಗೆ ಮುಂದೆ ಸಮಸ್ಯೆಯಾಗಲಿದೆ.

ಈ ಮಲಯಾಳಂ ಭಾಷಾ ಮಸೂದೆ ಕಾಸರಗೋಡು ಜಿಲ್ಲೆಯಲ್ಲಿ, ಕನ್ನಡ ಭಾಷಾತ್ಮಕ ಸುಲಲಿತ ಪ್ರದೇಶವಾದಲ್ಲಿ, ಜಾರಿಗೆ ಬರುವುದಾದರೆ, ಇದರ ಪರಿಣಾಮಗಳು ವ್ಯಾಪಕವಾಗಿದ್ದು, ಕನ್ನಡ ಭಾಷೆಗೆ ಮತ್ತು ಶತಮಾನಗಳಿಂದ ಕನ್ನಡವನ್ನು ಮಾತೃಭಾಷೆಯಾಗಿ ಬಳಸಿಕೊಂಡು ಓದುತ್ತಿರುವ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸಮಸ್ಯೆಯಾಗಲಿದೆ.

ಈ ಎಲ್ಲಾ ವಿಷಯಗಳ ಬಗ್ಗೆ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು ಹಾಗೂ ಅಧಿಕಾರಿಗಳು ಕೇರಳದ ಕೆಲವು ಸಂಘ ಸಂಸ್ಥೆಗಳ ವಕೀಲರವನ್ನು ಕಸಾಪ ಅಧ್ಯಕ್ಷರು ಹಾಗೂ ಕೇರಳ ಸರ್ಕಾರದ ಮಾನ್ಯ ರಾಜ್ಯಪಾಲರಾದ ಶ್ರೀ ರಾಜೇಂದ್ರ ವಿಶ್ವನಾಥ್ ಅರ್ಲೆಕರ್ ರವರನ್ನು **ದಿನಾಂಕ:07.01.2026ರಂದು ಕಾಸರಗೋಡಿನಲ್ಲಿ ಭೇಟಿ ಮಾಡಿ ಕಾಸರಗೋಡಿನ** ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯಗಳ ಕುರಿತು ಹಾಗೂ ಮಲಯಾಳಂ ಮಸೂದೆ-2025ರಲ್ಲಿ ಕಾಸರಗೋಡನ್ನು ಹೊರತುಪಡಿಸಲು ಮನವಿ ಸಲ್ಲಿಸಲಾಗಿದೆ. ಈ ಮಸೂದೆ ಪ್ರಸ್ತುತ ರಾಜ್ಯಪಾಲರ ಕಚೇರಿಯಲ್ಲಿ ಅನುಮೋದನೆಗೆ ಬಾಕಿ ಇದ್ದು, ರಾಜ್ಯಪಾಲರು ಗಡಿ ಪ್ರಾಧಿಕಾರದ ನಿಯೋಗಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ, ಈ ಮಸೂದೆಯನ್ನು ಇನ್ನೊಮ್ಮೆ ಪರಿಶೀಲನೆ ಮಾಡಿ ಸೂಕ್ತ ಕಾನೂನು ರೀತಿಯ ಕ್ರಮತೆಗೆದುಕೊಳ್ಳುವುದಾಗಿ ನಿಯೋಗಕ್ಕೆ ಆಶ್ವಾಸನೆ ನೀಡಿರುತ್ತಾರೆ.

ಕರ್ನಾಟಕ ಮುಖ್ಯಮಂತ್ರಿಗಳು ಕೇರಳದ ಮುಖ್ಯಮಂತ್ರಿಗಳಿಗೆ ಈಗಾಗಲೇ ಈ ಮಸೂದೆಯನ್ನು ವಾಪಸ್ಸು ಪಡೆಯಲು ದಿನಾಂಕ:08.01.2026 ಪತ್ರ ಬರೆದಿರುತ್ತಾರೆ.

ಈ ಮೇಲ್ಕಂಡಂತೆ ಕ್ರಮವಹಿಸುವುದರ ಮೂಲಕ ಗಡಿನಾಡು ಕನ್ನಡಿಗರ, ಹೊರನಾಡು ಕನ್ನಡಿಗರ ಹಿತ ಕಾಪಾಡಲು ಸರ್ಕಾರವು ಎಲ್ಲಾ ಕ್ರಮಗಳನ್ನು ಕೈಗೊಂಡಿದೆ ಎಂದು ಸರ್ಕಾರಕ್ಕೆ ಮಾಹಿತಿ ನೀಡಲಾಗಿದೆ.

**(ಡಿ. ಸುಧಾಕರ್)**
ಯೋಜನಾ ಸಚಿವರು